ಆಯೋಗದ ಉಪಾಧ್ಯಕ್ಷರನ್ನು ಶೇ. 100ರಷ್ಟು ತುಂಬಿಕೊಡುವ ಸೌಲಭ್ಯವನ್ನು ಮುಂದುವರೆದ ವಿದೇಶೀ ಸಹಾಯದ ಯೋಜನೆಗಳಿಗೂ ಅನ್ವಯಿಸುವಂತೆ ಕೋರಲಾಗಿತ್ತು.

ಬೆಂಗಳೂರು ಟ್ರಾಫಿಕ್ ವಿಭಾಗದ ಸಿಬ್ಬಂದಿ ಸಂಖ್ಯೆ.

64 (193) ಶ್ರೀ ರಾಮಲಿಂಗರೆಡ್ಡಿ (ಜಯನಗರ):–

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ಕೆಲಸ ಮಾಡುತ್ತಿರುವ ಟ್ರಾಫಿಕ್ ಕಾನ್ಸ್‌ಟೇಬಲ್‌ಗಳು, ಸಬ್ ಇನ್ಸ್‌ಪೆಕ್ಟರ್‌ಗಳು, ಅಸಿಸ್ಟೆಂಟ್ ಕಮೀಷನರ್‌ಗಳು ಮತ್ತು ಇತರೆ ಅಧಿಕಾರಿಗಳ ಸಂಖ್ಯೆ ಎಷ್ಟು;

ಆ) ಬೆಂಗಳೂರು ಟ್ರಾಫಿಕ್ ವಿಭಾಗದಲ್ಲಿ ಸಿಬ್ಬಂದಿಯ ಬಲವನ್ನು ವೃದ್ಧಿಸುವ ಯಾವುದಾದರೂ ಪ್ರಸ್ತಾಪವು ಇದೆಯೇ;

ಇ) ಹಾಗಿದ್ದಲ್ಲಿ ಭರ್ತಿ ಮಾಡಲು ಉದ್ದೇಶಿಸಿರುವ ಹುದ್ದೆಗಳ ಸಂಖ್ಯೆ ಎಷ್ಟು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಯವರು):–

ಅ) ಡೆಪ್ಯೂಟಿ ಕಮೀಷನರ್ ಆಫ್ ಪೊಲೀಸ್‌ಗಳು	– 2
ಅಡಿಷನಲ್ ಪೊಲೀಸ್ ಕಮೀಷನರ್‌ಗಳು	– 2
ಪೊಲೀಸ್ ಇನ್ಸ್‌ಪೆಕ್ಟರ್‌ಗಳು	– 14
ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು	– 37
ಅಸಿಸ್ಟೆಂಟ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು	– 60
ಹೆಡ್ ಕಾನ್ಸ್‌ಟೇಬಲ್‌ಗಳು	– 237
ಪೊಲೀಸ್ ಕಾನ್ಸ್‌ಟೇಬಲ್‌ಗಳು	– 704

ಆ) ಇದೆ.

ಇ) 1 ಅಸಿಸ್ಟೆಂಟ್ ಕಮೀಷನರ್ ಆಫ್ ಪೊಲೀಸ್, 3 ಪೊಲೀಸ್ ಇನ್ಸ್‌ಪೆಕ್ಟರ್‌ಗಳು, 19 ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು, 10 ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್‌ಗಳು, 93 ಹೆಡ್ ಕಾನ್ಸ್‌ಟೇಬಲ್‌ಗಳು, 368 ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಇದೆ. ಇವುಗಳ ಪೈಕಿ ಈ ಕೆಳಗಿನ ಹುದ್ದೆಗಳಿಗೆ ಈಗಾಗಲೇ ಮಂಜೂರಾತಿ ನೀಡಿದೆ.

ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್‌ಗಳು 18, ಮುಖ್ಯ ಪೇದೆಗಳು 39, ಪೊಲೀಸ್ ಪೇದೆಗಳು 26, ಉಳಿದ ಹುದ್ದೆಗಳನ್ನು ಸೃಷ್ಟಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಬೆಂಗಳೂರಿನ ಹಾಲಿನ ಡೈರಿಯಲ್ಲಿ ಬ್ಯಾಕ್‌ಲಾಗ್ ತುಂಬುವ ಬಗ್ಗೆ.

65 (195) ಶ್ರೀಮತಿ ಮೋಟಮ್ಮ (ಮೂಡಿಗೆರೆ)

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಹಾಲಿನ ಡೈರಿಯಲ್ಲಿ ದಿನಾಂಕ 16.4.91ರಲ್ಲಿ ಸರ್ಕಾರದ ಆದೇಶ ಹಾಗೂ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಕೊರತೆ ತುಂಬುವ ದೃಷ್ಟಿಯಿಂದ 16 ಜನರಿಗೆ ಬಡ್ತಿ ನೀಡಲು ಕ್ರಮ ಕೈಗೊಂಡಿದ್ದು ನಿಜವೇ;

ಅ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಯವರು):–

ಅ) ನಿಜ.

(ಈ ಕ್ರಮ ನಿಯಮಾವಳಿ ಪ್ರಕಾರ ಇಲ್ಲದ ಪ್ರಯುಕ್ತ ದಿನಾಂಕ 26.8.91ರ ಬೆಂಗಳೂರು ಒಕ್ಕೂಟದ ಆಡಳಿತ ಮಂಡಳಿ ಸಭೆಯು ರದ್ದು ಪಡಿಸಿರುತ್ತದೆ.)

ಆ) ಈ 16 ಜನರಿಗೆ ಕಾಲಮಿತಿ ಬಡ್ತಿಯನ್ನು ನೀಡಲಾಗಿದೆ.

The Construction of barrage across the halla near Gowthahally village in Mudigere Taluk.

66 (196) SMT. MOTAMMA (Mudigere):–

Will the Chief Minister be pleased to state?

a) The reasons for dropping the work for the construction of barrage across the halla near Gowthahally village in Mudigere taluk at final stage though the estimate was prepared;

b) How many Minor Irrigation works have been sanctioned during 1992–93 in Chickmagalur District?

Sri. M. Veerappa Moily (Chief Minister):–

a) This work is not included in any of the approved list of works during 1992–93. Hence the question of dropping does not arise.

b) One

ಮೂಡಿಗೆರೆ ತಾಲ್ಲೂಕಿನ ಕುದುರೆಮುಖ ಪ್ರದೇಶಕ್ಕೆ ಜೂನಿಯರ್ ಕಾಲೇಜು ಮಂಜೂರಾತಿ.

67 (197) ಶ್ರೀಮತಿ ಮೋಟಮ್ಮ (ಮೂಡಗೆರೆ):–

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೂಡಿಗೆರೆ ತಾಲ್ಲೂಕ್ ಕುದುರೆಮುಖ ಪ್ರದೇಶಕ್ಕೆ ಸರ್ಕಾರಿ ಜ್ಯೂನಿಯರ್ ಕಾಲೇಜು ಮಂಜೂರಾಗಿದ್ದು ಯಾವಾಗ;

ಆ) ಹಾಗಿದ್ದಲ್ಲಿ ಇದುವರೆವಿಗೂ ನೇಮಕ ಮಾಡಲಾಗಿರುವ ಉಪನ್ಯಾಸಕರ ಸಂಖ್ಯೆ ಎಷ್ಟು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಯವರು):–

ಅ) ಮೂಡಿಗೆರೆ ತಾಲ್ಲೂಕ್ ಕುದುರೆಮುಖ ಪ್ರದೇಶಕ್ಕೆ ಸರ್ಕಾರಿ ಆದೇಶ ಸಂಖ್ಯೆ: ಇಡಿ 502 ಎಸ್‌ಹೆಚ್‌ಹೆಚ್ 91 ದಿನಾಂಕ: 25–9–91ರಲ್ಲಿ ಸರ್ಕಾರಿ ಸಂಯುಕ್ತ ಪದವಿಪೂರ್ವ ಕಾಲೇಜು ಮಂಜೂರು ಆಗಿದೆ.